## ಕಛೇರಿ ಆದೇಶ

ವಿಷಯ: ಬ್ಯಾಕ್‌ಲಾಗ್ ದ್ವಿತೀಯ ದರ್ಜೆ ಸಹಾಯಕರ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಹಾಗೂ ಆಕ್ಷೇಪಣೆಗಳಿಗೆ ಅವಕಾಶ ನೀಡುವ ಬಗ್ಗೆ.

ಉಲ್ಲೇಖ: (1) ಕಾಲೇಜು ಶಿಕ್ಷಣ ಇಲಾಖೆಯ ಅನುಮತಿ ಪತ್ರ ಸಂಖ್ಯೆ:ಕಾಶಿಇ/65/ಬ್ಯಾಹುಭ/ಮಂವಿ/2023-24/ನೇವಿ-2, ಬೆಂಗಳೂರು, ದಿನಾಂಕ 16-08-2023.

(2) ಕಾಶಿಇ/ಪ್ರಾಕಮ/3/ಬ್ಯಾಹು/2009-10/ಭಾಗ-2, ಮಂಗಳೂರು, ದಿನಾಂಕ:21-09-2023.

(3) ಪತ್ರಿಕಾ ಪ್ರಕಟಣಣೆ ದಿನಾಂಕ ಉದಯವಾಣಿ ಪತ್ರಿಕೆ - ದಿನಾಂಕ 20-11-2023 ಮತ್ತು ಟೈಮ್ಸ್ ಆಫ್ ಇಂಡಿಯ 22-11-2023.

. . . .

ಮೇಲಿನ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರ ಅನುಮತಿಯ ಮೇರೆಗೆ ಈಗಾಗಲೇ ದ್ವಿತೀಯ ದರ್ಜೆ ಸಹಾಯಕರು ಬ್ಯಾಕ್‌ಲಾಗ್ ಹುದ್ದೆಯನ್ನು ಭರ್ತಿ ಮಾಡಲು ಉಲ್ಲೇಖ (3)ರ ಪ್ರಕಾರ ದಿನಾಂಕ 20-11-2023ರ ಉದಯವಾಣಿ ಪತ್ರಿಕೆ ಹಾಗೂ ದಿನಾಂಕ 22-11-2023ರ ಟೈಮ್ಸ್ ಆಫ್ ಇಂಡಿಯದ ಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡಲಾಗಿತ್ತು. ಅದರಂತೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಅಂತಿಮ ದಿನಾಂಕದ ನಂತರದಲ್ಲಿ ಅರ್ಜಿಗಳನ್ನು ಪರಿಶೀಲಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು (ವಯಸ್ಸಿನ ಆಧಾರದ ಮೇರೆಗೆ 18 ರಿಂದ 29 ಮತ್ತು 29 ರಿಂದ 40 ವರ್ಷ) 2 ವಿಭಾಗಗಳಲ್ಲಿ ಪಿಯುಸಿ ಅಂಕಗಳ ಆಧಾರದ ಮೇಲೆ ರಚಿಸಿದ ಜೇಷ್ಠತಾ ಪಟ್ಟಿಯನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಹಾಗೂ ಕಾಲೇಜು ವೆಬ್‌ಸೈಟಿನಲ್ಲಿ ಪ್ರಕಟಿಸಲು ಆದೇಶಿಲಾಗಿದೆ.

ಅಂತೆಯೇ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ ಕಾಲೇಜಿನ ವೆಬ್‌ಸೈಟಿನಲ್ಲಿ ಪ್ರಕಟವಾದ ಒಂದು ವಾರದೊಳಗೆ ಲಿಖಿತವಾಗಿ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ ಮೆರಿಟ್ ಆಧಾರದಲ್ಲಿ ದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಗಳನ್ನು ಆಹ್ವಾನಿಸಲಾಗುವುದು. ಒಂದು ವಾರದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗವುದಿಲ್ಲ.

ಜೇಷ್ಠತಾ ಪಟ್ಟಿಯಲ್ಲಿ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಪರಿಶೀಲಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

ಆದೇಶದ ಮೇರೆಗೆ

ಸಹಿ/-

ಪ್ರಾಂಶುಪಾಲರು